ಗ್ರಾನೈಟ್ ಕಟ್ಟಿಂಗ್ ಮತ್ತು ಪಾಲಿಷಿಂಗ್ ಘಟಕಗಳು

897 (1384); ಡಾ॥ ಮಾಲಕರೆಡ್ಡಿ ಎ.ಬಿ. (ಯಾದಗಿರಿ)

ಅ) ಗ್ರಾನೈಟ್ ಕಟ್ಟಿಂಗ್ ಮತ್ತು ಪಾಲಿಷಿಂಗ್ ಘಟಕಗಳನ್ನು ವಸತಿ ಪ್ರದೇಶಗಳಲ್ಲಿ ಸ್ಥಾಪಿಸಲು/ಆರಂಭಿಸಲು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅನುಮತಿ ನೀಡುತ್ತದೆಯೇ; ಇಂತಹ ಉದ್ಯಮಗಳು ಬಹುಪಾಲು ವಸತಿ ಪ್ರದೇಶಗಳಲ್ಲಿಯೇ ಇದ್ದು, ಇವುಗಳ ಸ್ಥಳಾಂತರಕ್ಕೆ ಸಾರ್ವಜನಿಕರಿಂದ, ಸಾರ್ವಜನಿಕ ಸಂಘಟನೆಗಳಿಂದ ಮನವಿಗಳೇನಾದರೂ ಬಂದಿವೆಯೇ;

ಆ) ರಾಜ್ಯದ ಯಾವ ಯಾವ ಭಾಗಗಳಿಂದ ಇಂತಹ ಮನವಿಗಳು ಬಂದಿವೆ; ಮನವಿಗಳನ್ನು ಸಲ್ಲಿಸಿದ ಸಂಘಟನೆಗಳು, ಮನವಿದಾರರ ವಿವರಗಳ ಸಮೇತ ಮಾಲಿನ್ಯ ನಿಯಂತ್ರಣ ಮಂಡಳಿ ಕೈಗೊಂಡಿರುವ ಕ್ರಮಗಳ ವಿವರ ನೀಡುವುದು?

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಗ್ರಾನೈಟ್ ಕಟ್ಟಿಂಗ್ ಮತ್ತು ಪಾಲಿಷಿಂಗ್ ಘಟಕಗಳನ್ನು 'ಕಿತ್ತಳೆ ವರ್ಗ' (Orange Category) ಉದ್ದಿಮೆ ಎಂದು ವರ್ಗೀಕರಿಸಿದ್ದು, ಇಂತಹ ವರ್ಗದ ಉದ್ದಿಮೆಗಳನ್ನು ಯಾವುದೇ ನಗರ/ಮುನಿಸಿಪಾಲಿಟಿ ವ್ಯಾಪ್ತಿಯಲ್ಲಿ ಸ್ಥಾಪಿಸಲು ಕಾನೂನಿನಲ್ಲಿ ಅವಕಾಶವಿರುವುದಿಲ್ಲ.

ಇವುಗಳ ಸ್ಥಳಾಂತರಕ್ಕೆ ಆಗಿಂದಾಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಮನವಿಗಳು ಬಂದಿರುತ್ತವೆ.

ಆ) ಇಲಕಲ್ ಪಟ್ಟಣದಲ್ಲಿರುವ ಕೈಗಾರಿಕೆಗಳ ಮೇಲೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ದೂರುಗಳು ಬಂದಿರುತ್ತದೆ.

<u>ದೂರುಗಳನ್ನು ನೀಡಿರುವ ಸಂಸ್ಥೆಗಳ ವಿವರ:</u>

ಅ) ಅಖಿಲ ಭಾರತ ಭ್ರಷ್ಟಾಚಾರ ನಿರ್ಮೂಲನ ಸಮಿತಿ, ಇಳಕಲ್. ಬಾಗಲಕೋಟೆ ಜಿಲ್ಲೆಯ ಇಲಕಲ್ ಪಟ್ಟಣದಲ್ಲಿರುವ ಘಟಕಗಳಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸಾರ್ವಜನಿಕ ದೂರಿನನ್ವಯ 2011 ರಲ್ಲಿ ಮತ್ತು 2014 ರಲ್ಲಿ ಘಟಕಗಳನ್ನು ಮುಚ್ಚುವ ಆದೇಶವನ್ನು ನೀಡಲಾಗಿತ್ತು. ಸದರಿ ಘಟಕದವರು ತ್ಯಾಜ್ಯವನ್ನು ಸಮರ್ಪಕ ರೀತಿಯಲ್ಲಿ ವಿಲೇವಾರ ಮಾಡುವ ಬಗ್ಗೆ ಮುಚ್ಚಳಿಕೆಯನ್ನು ನೀಡಿದ ಮೇಲೆ ಮುಚ್ಚುವ ಆದೇಶವನ್ನು ಮಂಡಳಿಯಿಂದ ಹಿಂಪಡೆಯಲಾಗಿರುತ್ತದೆ.

ಆ) ಬೆಂಗಳೂರು ನಗರ ಜಿಲ್ಲೆಯ ಆನೆಕಲ್ ತಾಲ್ಲೂಕಿನ ಜಿಗಣಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಲ್ಲು ಕತ್ತರಿಸುವ ಹಾಗೂ ಪಾಲಿಶ್ ಮಾಡುವ ಘಟಕಗಳಿಂದ ಉಂಟಾಗಿರುವ ತ್ಯಾಜ್ಯವನ್ನು ಸೂಕ್ತ ಸ್ಥಳ ಗುರುತಿಸಿ ಅಲ್ಲಿ ವಿಲೇವಾರಿ ಮಾಡುತ್ತಿದೆ.

ಇ) ತಮಕೂರು ಜಿಲ್ಲೆಯಲ್ಲೂ ಸಹ ಈ ತರಹ ಘಟಕಗಳು ಇದ್ದು ಇಲ್ಲಿಯೂ ಸಹ ದೂರುಗಳು ಬಂದಿರುತ್ತವೆ.

ತುಮಕೂರು ಜಿಲ್ಲೆಯಲ್ಲಿ ಈ ರೀತಿಯ ತ್ಯಾಜ್ಯಗಳನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡದೇ ಇರುವವರ ಮೇಲೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುತ್ತಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಈಗಾಗಲೇ ಕಾರಣ ಕೇಳುವ ನೋಟಿಸ್ ನೀಡಲಾಗಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ರೀತಿ ಅಸಮರ್ಪಕ ತ್ಯಾಜ್ಯ ವಿಲೇವಾರಿ ಮಾಡುವುದರ ಕುರಿತು ಪರಿವೀಕ್ಷಣೆ ನಡೆಸಿ ಸಂಬಂಧಪಟ್ಟ ಉದ್ದಿಮೆಗಳ ಮೇಲೆ ಜಲ ಹಾಗೂ ವಾಯು ಕಾಯ್ದೆಗಳನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.